

ಕ್ಷಮಾ ಅವರ ಚಿತ್ರಬೇಟೆಗೊಂದು ನಿದರ್ಶನ

# ಕ್ಷಮಾ ಕಣ್ಣಿನ ಪಕ್ಷಿಪ್ರಪಂಚ



ಕ್ಷಮಾ ಗಿರೀಶ್

**ಅಮ್ಮನ ಅಗಲಿಕೆಯ ನೋವು ಮರೆಯಲು ಕ್ಷಮಾ ಗಿರೀಶ್ ಆರಿಸಿಕೊಂಡಿದ್ದು ಪ್ರಕೃತಿಯ ಮಡಿಲು. ಪಕ್ಷಿಗಳ ಜಾಡು ಹಿಡಿದು ಹೊರಟ ಅವರು ಫೋಟೊಗ್ರಫಿ ದಾರಿಯಲ್ಲಿ ಬಹುದೂರ ಸಾಗಿದ್ದಾರೆ.**

■ ಮಂಜುಶ್ರೀ ಕಡಕೋಳ

'ಆರು ವರ್ಷಗಳ ಹಿಂದಿನ ಮಾತು. ಜೀವ ನೀಡಿದ ಹೆತ್ತಮ್ಮ ಇಲ್ಲದ ದಿನಗಳವು. ಉಸಿರು ಕೊಟ್ಟವಳೇ ಇಲ್ಲವಾದಾಗ ಉಸಿರೇ ನಿಂತು ಹೋದ ಭಾವ. ಪ್ರಕೃತಿಯಲ್ಲಿ ಲೀನವಾದ ಅಮ್ಮನ ನೆನಪು ಪದೇಪದೇ ಕಾಡತೊಡಗಿದಾಗ ಮತ್ತೆ ಅಮ್ಮನ ಸಾಂಗತ್ಯ ಒದಗಿಸಿದ್ದು ಅದೇ ಪ್ರಕೃತಿ'.

ಬೆಂಗಳೂರಿನ ಸಾಫ್ಟ್‌ವೇರ್ ಎಂಜಿನಿಯರ್ ಕ್ಷಮಾ ಗಿರೀಶ್, ಅಮ್ಮನ ಅಗಲಿಕೆಯ ನೋವಿಗೆ ಸಾಂತ್ವನ ಕಂಡುಕೊಂಡಿದ್ದು ಹೀಗೆ.

ನೋವು ಮರೆಯಲು ಪ್ರಕೃತಿಗಿಂತ ಬೇರೆ ಸಾಂಗತ್ಯ ಬೇಕಿಲ್ಲ ಅನ್ನುವುದನ್ನು ಕಂಡುಕೊಂಡಿರುವ ಕ್ಷಮಾ, ಈಗ ಪಕ್ಷಿಗಳ ಛಾಯಾಗ್ರಹಣದಲ್ಲಿ ನಿಧಾನವಾಗಿ ತಮ್ಮದೇ ಛಾಪು ಮೂಡಿಸುತ್ತಿದ್ದಾರೆ. ಬಿಎಸ್‌ಎನ್‌ಎಲ್‌ನಲ್ಲಿರುವ ಅಪ್ಪ ಗಿರೀಶ್ ಅವರೊಂದಿಗೆ ಕೆರೆಗಳ ವಿಹಾರ ಮಾಡುತ್ತಲೇ ಹಕ್ಕಿಗಳ ಚಿಲಿಪಿಲಿಯತ್ತ ಆಕರ್ಷಿತರಾದ ಅವರು, ಅವುಗಳ ಚಲನವಲನ, ಜೀವನಶೈಲಿ, ಊಟ–ಹಾರಾಟ ಇತ್ಯಾದಿಗಳನ್ನು ಸೂಕ್ಷ್ಮವಾಗಿ ಅಭ್ಯಸಿಸುತ್ತಾ ಅವುಗಳ ಚಿತ್ರಗಳನ್ನು ಸೆರೆಹಿಡಿಯತೊಡಗಿದರು.

ಇದುವರೆಗೆ ಸುಮಾರು 300 ಪ್ರಭೇದಗಳ ಪಕ್ಷಿಗಳ ಚಿತ್ರಗಳನ್ನು ತೆಗೆದಿರುವ ಕ್ಷಮಾ, ಹಕ್ಕಿಗಳ ಗುಣ ಸ್ವಭಾವ, ಅವುಗಳ ಧ್ವನಿ, ಆಹಾರಕ್ರಮ, ವರ್ತನೆ ಇತ್ಯಾದಿಗಳ ಕುರಿತು ಪೂರ್ವಸಿದ್ಧತೆ ಮಾಡಿಕೊಂಡೇ 'ಪಕ್ಷಿಗಳ ಚಿತ್ರಬೇಟೆ'ಗೆ ಇಳಿಯುತ್ತಾರೆ. ಅದಕ್ಕಾಗಿ ಅವರು ಮಾಡಿಕೊಳ್ಳುವ ಹೋಂವರ್ಕ್‌ನಲ್ಲಿ ಉಡುಗೆ ತೊಡುಗೆಗಳಿಂದ ಹಿಡಿದು ಪಕ್ಷಿಗಳ ಆವಾಸ ಸ್ಥಾನಕ್ಕೆ ಧಕ್ಕೆಯಾಗದಂತೆ ವರ್ತಿಸುವುದೂ ಇರುತ್ತದೆ. ಪ್ರತಿ ಪ್ರಾಣಿ–ಪಕ್ಷಿಗಳಿಗೂ ಅದರದೇ ಆದ 'ಪರ್ಸನಲ್ ಸ್ಪೇಸ್' ಇರುತ್ತದೆ ಎನ್ನುವುದರಲ್ಲಿ ಗಾಢವಾಗಿ ನಂಬಿಕೆ ಇರಿಸಿಕೊಂಡಿರುವ ಅವರು, ಪ್ರಾಣಿ–ಪಕ್ಷಿಗಳ ಆಘ್ರಾಣಕ್ಕೆ ಸೂಕ್ಷ್ಮವಾಗಿ ಭಿನ್ನ ಭಾವ ಮೂಡಿಸುವ ಸುಗಂಧ ದ್ರವ್ಯವನ್ನೂ ಬಳಸುವುದಿಲ್ಲ. ಆದಷ್ಟು ಪ್ರಕೃತಿಯೊಳಗೆ ಮಿಳಿತವಾಗಿರುವಂಥ ಉಡುಗೆ–ತೊಡುಗೆ ಹಾಗೂ ತಾಳ್ಮೆಯ ವರ್ತನೆಗಳನ್ನು ರೂಢಿಸಿಕೊಂಡಿದ್ದಾರೆ.

## ಪಕ್ಷಿಗಳ ಭಿನ್ನ ಜಗತ್ತು...

ಪಕ್ಷಿಗಳು ಮನುಷ್ಯನಿಗಿಂತಲೂ ಸೂಕ್ಷ್ಮ ಮತ್ತು ಸಂಕೋಚ ಸ್ವಭಾವದವು. ಅವುಗಳ ಆಹಾರ ಕ್ರಮ, ವರ್ತನೆ, ವಲಸೆ